ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

ದೂರವಾಣಿ: 0831-2406310 ಫ್ಯಾಕ್ಸ್: 2452644 deo.belgaum@gmail.com

ನಂ.ಕಂಶಾ/ಕೆಎಲ್‌ಆರ್(109)/ಸಿಆರ್-06/2018-19

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಳಗಾವಿ, ದಿನಾಂಕ: 12-[illegible]-2019

# ಅಧಿಸೂಚನೆ

ವಿಷಯ: ಬೆಳಗಾವಿ ತಾಲೂಕಿನ ಪೀರನವಾಡಿ ಗ್ರಾಮದ ರಿ.ಸ.ನಂ. 116/1 ರ ಕ್ಷೇತ್ರ 01ಎ-00ಗು ಕೃಷಿ ಜಮೀನು ಶೈಕ್ಷಣಿಕ ಉದ್ದೇಶಕ್ಕಾಗಿ ಗುತ್ತಿಗೆ ಪಡೆಯಲು Lourdes Education Soceity Peeranwadi Tal: Belagavi ಇವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ವಿನಾಯಿತಿ ನೀಡುವ ಕುರಿತು.

ಓದಲಾಗಿದೆ:-

(1) Lourdes Education Soceity Peeranwadi Tal: Belagavi ಇವರ ನಮೂನೆ 15-ಎ ರಲ್ಲಿನ ಅರ್ಜಿ ದಿನಾಂಕ: 07-03-2018
(2) ತಹಶೀಲದಾರ್, ಬೆಳಗಾವಿ ಇವರ ಪತ್ರ ನಂ.ಕಭೂಸು/ವಿವ-03/2018-19, ದಿನಾಂಕ: 04-02-2019
(3) ಉಪವಿಭಾಗಾಧಿಕಾರಿ, ಬೆಳಗಾವಿ ಇವರ ಪತ್ರ ನಂ.ಕಭೂಸು/ಸಿಆರ್-13/2018-19, ದಿನಾಂಕ: 12-02-2019
(4) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961/74ರ ಕಲಂ 79-ಬಿ ಮತ್ತು 109
(5) ಕರ್ನಾಟಕ ಭೂ ಸುಧಾರಣೆ ನಿಯಮಗಳು 1974ರ ನಿಯಮ 38-ಬಿ(3)

1) Lourdes Education Soceity Peeranwadi Tal: Belagavi ಇವರು ದಿನಾಂಕ: 07-03-2018 ರ ನಮೂನೆ 15-ಎ ರಡಿಯಲ್ಲಿನ ಅರ್ಜಿಯಲ್ಲಿ ಈ ಕೆಳಕಂಡ ಪರಿಶಿಷ್ಟದಲ್ಲಿನ ಜಮೀನನ್ನು ಧಾರ್ಮಿಕ ಉದ್ದೇಶಕ್ಕಾಗಿ ಗುತ್ತಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961/74ರ ಕಲಂ 109ರಡಿ ಅನುಮತಿಗಾಗಿ ಕೋರಿದ್ದಾರೆ.

**ಪರಿಶಿಷ್ಟ**

| ಜಿಲ್ಲೆ: ಬೆಳಗಾವಿ | ತಾಲೂಕು: ಬೆಳಗಾವಿ | ಹೋಬಳಿ: ಬೆಳಗಾವಿ | ಗ್ರಾಮ: ಪೀರನವಾಡಿ |
|---|---|---|---|
| **ಕ್ರ. ಸಂ** | **ಸರ್ವೆ ನಂಬರು** | **ಒಟ್ಟು ಕ್ಷೇತ್ರ ಎ-ಗುಂ** | **ಗುತ್ತಿಗೆ ಕ್ಷೇತ್ರ ಎ-ಗುಂ** |
| 1 | 116/1 | 06-04 | 01-00 |

2) ತಹಶೀಲದಾರ, ಬೆಳಗಾವಿ ಮತ್ತು ಉಪವಿಭಾಗಾಧಿಕಾರಿ, ಬೆಳಗಾವಿ ಇವರಿಂದ ಮೇಲೆ ಅ.ನಂ.(2) ಮತ್ತು (3) ರಂತೆ ಒದಲಾದ ವರದಿಯಡಿ ಸಂಸ್ಥೆಗೆ ಜಮೀನು ಗುತ್ತಿಗೆ ಪಡೆಯಲು ಕಲಂ 109ರಂತೆ ಅನುಮತಿ ನೀಡಬಹುದಾಗಿದೆ ಎಂಬ ಶಿಫಾರಸ್ಸಿನೊಂದಿಗೆ ಸಲ್ಲಿಸಿದ್ದು, ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

(1) ಅರ್ಜಿದಾರ ಸಂಸ್ಥೆಯು ಜಿಲ್ಲಾ ನೊಂದಣಾಧಿಕಾರಿಗಳು ಬೆಳಗಾವಿ ಇವರ ನೊಂದಣಿ ಸಂಖ್ಯೆ BEL-S101-2014-15 Date: 12-05-2014 ರಂದು ನೊಂದಾಯಿಸಲಾಗಿದೆ.
(2) ಭೂ ಮಾಲೀಕರು ಜಮೀನನ್ನು ಸಂಸ್ಥೆಗೆ ಗುತ್ತಿಗೆ ನೀಡಲು ಗುತ್ತಿಗೆ ಕರಾರು ಪತ್ರ ಹಾಜರಪಡಿಸಲಾಗಿದೆ.
(3) ಸದರೀ ಜಮೀನಿನ ಕುರಿತು ಕಲಂ 79-ಎ, 79-ಬಿ ರಡಿ ಯಾವುದೇ ವ್ಯವಹಾರಗಳಾಗಿಲ್ಲವೆಂದು ಅಧೀನ ಅಧಿಕಾರಿಗಳ ವರದಿಯಲ್ಲಿ ದೃಢೀಕರಿಸಲಾಗಿದೆ.
(4) ಯಾವುದೇ ಯೋಜನೆಗಾಗಿ ಜಮೀನು ಭೂ ಸ್ವಾಧೀನ ನಡುವಳಿಗ್ಗಾಗಿ ಪ್ರಸ್ತಾಪಿಸಲಾಗಿಲ್ಲವೆಂದು ಅಧೀನ ಅಧಿಕಾರಿಗಳ ವರದಿಯಲ್ಲಿ ದೃಢೀಕರಿಸಲಾಗಿದೆ.
(5) ಜಮೀನು ಕರ್ನಾಟಕ ಪಲವು ಜಮೀನುಗಳ ಹಸ್ತಾಂತರ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ) ನಿಷೇಧ ಕಾಯ್ದೆ, 1978ರಡಿ ಒಳಪಡುವುದಿಲ್ಲವೆಂದು ಅಧೀನ ಅಧಿಕಾರಿಗಳ ವರದಿಯಲ್ಲಿ ದೃಢೀಕರಿಸಲಾಗಿದೆ.
(6) ಜಮೀನು ಯಾವುದೇ ಕಾಯ್ದೆಯಡಿ ಸರ್ಕಾರಕ್ಕೆ ನಿಹಿತವಾದ ಜಮೀನಾಗಿರುವುದಿಲ್ಲವೆಂದು ಅಧೀನ ಅಧಿಕಾರಿಗಳ ವರದಿಯಲ್ಲಿ ದೃಢೀಕರಿಸಲಾಗಿದೆ.

3) ಮೇಲಿನ ಅಂಶಗಳ ಮೇರೆಗೆ ಅರ್ಜಿದಾರ ಸಂಸ್ಥೆ Lourdes Education Soceity Peeranwadi Tal: Belagavi ಇವರಿಗೆ ಮೇಲಿನ ಪರಿಶಿಷ್ಟದಲ್ಲಿನ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ನೋಂದಾಯಿತ ಗುತ್ತಿಗೆ ಪತ್ರ ಮೂಲಕ ಹೊಂದಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961/74ರ ಕಲಂ 63, 79-ಎ, 79-ಬಿ ಮತ್ತು 80ರಿಂದ ವಿನಾಯಿತಿಯೊಂದಿಗೆ ಕಲಂ 109(1)(ii) ರಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

**ಶರ್ತುಗಳು:-**

(1) ಯಾವ ಉದ್ದೇಶಕ್ಕಾಗಿ ಜಮೀನು ಗುತ್ತಿಗೆ ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಜಮೀನು ಬಳಸತಕ್ಕದ್ದು ಮತ್ತು ಬೇರಾವುದೇ ಉದ್ದೇಶಕ್ಕಾಗಿ ಬಳಸುವುದನ್ನು ನಿರ್ಬಂಧಿಸಲಾಗಿದೆ.

..2

Scanned with CamScanner

(2) ಈ ಅನುಮತಿ ಪತ್ರದ ಎರಡು ವರ್ಷಗಳ ಒಳಗಾಗಿ ಸಕ್ಷಮ ಪ್ರಾಧಿಕಾರದಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 95ರಡಿ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶ ಹೊಂದತಕ್ಕದ್ದು, ಸಕ್ಷಮ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದಿಸಿಕೊಳ್ಳುವುದು ಮತ್ತು ನಂತರವೇ ಸದರೀ ಅವಧಿಯ ಒಳಗಾಗಿ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಈ ಬಗ್ಗೆ ಸದರೀ ಅವಧಿಯ ಒಳಗಾಗಿ ಸಂಬಂಧಿತ ಉಪವಿಭಾಗಾಧಿಕಾರಿಗಳ ಮೂಲಕ ಜಿಲ್ಲಾಧಿಕಾರಿಗಳಿಗೆ ದಾಖಲೆಗಳೊಂದಿಗೆ ಲಿಖಿತವಾಗಿ ವರದಿ ನೀಡತಕ್ಕದ್ದು.

(3) ನಗರ ಯೋಜನಾ ಇಲಾಖೆ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಸದರೀ ಜಮೀನು ಕೃಷಿ, ಸಾರ್ವಜನಿಕ ಉಪಯೋಗಿ ಅಥವಾ ಇನ್ನಾವುದೇ ಉದ್ದೇಶಕ್ಕಾಗಿ ವ್ಯಾಪಕಾಭಿವೃದ್ಧಿ ಯೋಜನೆಯಡಿ ಕಾಯ್ದಿರಿಸಿದ್ದಲ್ಲಿ, ಜಮೀನು ಉಪಯೋಗಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಲಿಖಿತ ಅನುಮತಿಯನ್ನು ತಪ್ಪದೇ ಹೊಂದತಕ್ಕದ್ದು.

(4) ಯಾವುದೇ ರಾಷ್ಟ್ರೀಕೃತ ಹಣಕಾಸು ಸಂಸ್ಥೆಯಿಂದ ಮಾತ್ರ ಸದರೀ ಜಮೀನಿನ ಮೇಲೆ ಸಾಲ ಹೊಂದಲು ಸಂಸ್ಥೆಗೆ ಅವಕಾಶ ಇರುತ್ತದೆ.

(5) ಸಂಸ್ಥೆಯ ಚಟುವಟಿಕೆಗಳು ಭಾರತೀಯ ಸಂವಿಧಾನ ಮತ್ತು ಕಾನೂನುಗಳಿಗೆ ಒಳಪಟ್ಟಿರುವ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(6) ಈ ಅನುಮತಿಯು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961/74ರ ಕಲಂ 109ಕ್ಕೆ ಮಾತ್ರ ಸೀಮಿತವಾಗಿದ್ದು, ಇನ್ನಿತರೆ ಯಾವುದೇ ಕಾಯ್ದೆ, ಕಾನೂನುಗಳ ಉಲ್ಲಂಘನೆಯ ಅಂಶ ಕಂಡುಬಂದಲ್ಲಿ ಅದರಂತೆ ಕ್ರಮ ಕೈಕೊಳ್ಳಲು ಜಿಲ್ಲಾಧಿಕಾರಿಗಳು ಸಕ್ಷಮರಾಗಿದ್ದಾರೆ.

(7) ಅರ್ಜಿದಾರರು ತಪ್ಪು ಮಾಹಿತಿ/ದಾಖಲೆಗಳನ್ನು ನೀಡಿ ಈ ಅನುಮತಿಯನ್ನು ಪಡೆದಿದ್ದು ಈ ಮುಂದೆ ಕಂಡುಬಂದಲ್ಲಿ ಅಥವಾ ಮೇಲಿನ ಶರ್ತುಗಳ ಉಲ್ಲಂಘನೆ ಆಗಿದ್ದು ಕಂಡುಬಂದಲ್ಲಿ, ಈಗ ನೀಡಲಾಗಿರುವ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಜಮೀನನ್ನು ವಿನಾಮೌಲ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

18/04/19

(ಡಾ. ವಿಶಾಲ್ ಆರ್)
ಜಿಲ್ಲಾಧಿಕಾರಿಗಳು ಬೆಳಗಾವಿ

ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, (ಭೂ ಸುಧಾರಣೆ ಶಾಖೆ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ:-**

(1) ಉಪವಿಭಾಗಾಧಿಕಾರಿ, ಬೆಳಗಾವಿ
(2) ತಹಸೀಲದಾರ, ಬೆಳಗಾವಿ
(3) Lourdes Education Society Peeranwadi Tal: Belagavi

DEPUTY COMMISSIONER
ಜಿಲ್ಲಾ ಕಮೀಷನರ
ಬೆಳಗಾವಿ
BELAGAVI

ಜಿಲ್ಲಾಧಿಕಾರಿಗಳು ಬೆಳಗಾವಿ

Scanned with CamScanner